**ಸಿಸಿ ಸಂಖ್ಯೆ: 928/2025**

ಫ್ರಾಸಾ –1

**<u>ದಿನಾಂಕ 19.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ.ಎಸ್.ಬಿ. ಆರೋಪಿ ಪರ ವಕೀಲರಿಂದಃ–</u>**

ನಾನು ರೂ.2,50,000/– ಹಣವನ್ನು ಆರೋಪಿಗೆ ನೀಡುವ ಪೂರ್ವದಲ್ಲಿ ಬ್ಯಾಂಕ್ ನಿಂದ ಡ್ರಾ ಮಾಡಿದ್ದೆ ಎಂದು ಹೇಳಿದ್ದು, ಯಾವ ಬ್ಯಾಂಕ್ ನಿಂದ ಡ್ರಾ ಮಾಡಿದ್ದೆ ಎಂದು ದೂರಿನಲ್ಲಿ ಹೇಳಿಲ್ಲ. ಅದೇ ರೀತಿ ರೂ.1,50,000/– ಹಣವನ್ನು ಅವರಿಗೆ ನೀಡುವ ಪೂರ್ವದಲ್ಲಿ ಆ ಹಣ ನನ್ನ ಮನೆಯಲ್ಲಿ ಇತ್ತು ಎಂದು ಹೇಳಿದ್ದು, ಆ ವಿಷಯವನ್ನು ಕೂಡ ನನ್ನ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಆರೋಪಿತನಿಗೆ ಸಾಲ ಕೊಡುವ ಪೂರ್ವದಲ್ಲಿ ಯಾವುದೇ ಕರಾರು ಪತ್ರವನ್ನು ಮಾಡಿಕೊಂಡಿಲ್ಲ.

ದಿನಾಂಕ 16.07.2025 ರಂದು ಆರೋಪಿತ ನನಗೆ ಸಾಲವನ್ನು ವಾಪಸ್ಸು ಕೊಡುವುದಾಗಿ ಹೇಳಿದ್ದರು. ಆತ ಲೋಕೋಪಯೋಗಿ ಇಲಾಖೆ, ಶಿವಮೊಗ್ಗದಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಅವರಿಗೆ ತಿಂಗಳಿಗೆ ರೂ.84,000/– ಕ್ಕಿಂತ ಹೆಚ್ಚಿನ ವೇತನ ಇದೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿತ ನನಗೆ ಹೇಗೆ ಪರಿಚಯ ಎಂದರೆ ನಾನು ಮತ್ತು ಅವರು ಭದ್ರಾವತಿ ತಾಲ್ಲೂಕಿನ ಬಿ.ಆರ್.ಪಿ. ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡುವ ಅವಧಿಯಿಂದಲೂ ಪರಿಚಯವಿರುತ್ತಾರೆ.

ಆರೋಪಿತ ನನ್ನಿಂದ ಸಾಲ ಪಡೆಯುವ ಅನಿವಾರ್ಯತೆ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಅವರಿಗೆ ಸಾಲ ಕೊಡುವಾಗ ಅವರ ಸ್ನೇಹಿತ ಬಂದಿದ್ದು, ಅವರು ಯಾರು ಎಂದು ನನಗೆ ಗೊತ್ತಿಲ್ಲ.

ನಾನು ಆರೋಪಿಗೆ ಸಾಲ ಕೊಡುವ ಆರ್ಥಿಕ ಚೈತನ್ಯವನ್ನು ನಾನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 16.07.2025 ರಂದು ಆರೋಪಿತ ನನಗೆ ಚೆಕ್ಕನ್ನು ನೀಡಿದ್ದರು. ಅವರು ನನ್ನಿಂದ ಪಡೆದಿದ್ದ ಸಾಲದ ಹಣಕ್ಕೆ ಭದ್ರತೆಗಾಗಿ ಚೆಕ್ಕು ನೀಡಿದ್ದರು ಎಂದರೆ ಸರಿ. ಆರೋಪಿತ ನನ್ನಿಂದ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ.

ಆರೋಪಿತನ ಅತ್ತಿಗೆ ಅನ್ನಪೂರ್ಣಮ್ಮ ರವರು ನೀಡಿದ್ದ ಜಾಮೀನು ಚೆಕ್ಕನ್ನು ದುರುಪಯೋಗ ಮಾಡಿಕೊಂಡು ಆರೋಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹನುಮಂತ ಜಿ.ಹೆಚ್.)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಭದ್ರಾವತಿ**